0204/2049/0623/1418

II/III Semester 3 Year LL.B./VI Semester 5 Year B.A.LL.B./B.A.LL.B. (Maj.-Min. System)/ B.B.A.LL.B./B.Com.LL.B. Examination, July/August 2026
ADMINISTRATIVE LAW

Duration : 3 Hours

Max. Marks : 100

Instructions :
1. **Answer Q. No. 9 and any five of the remaining questions.**
2. **Q. No. 9 carries 20 marks and the remaining questions carry 16 marks each.**
3. **Answers should be written either in English or Kannada completely.**

Q. No. 1. Explain the reasons for the growth of delegated legislation and procedural control over delegated legislation. Marks : 16

ಪ್ರತ್ಯಾಯೋಜಿತ ಶಾಸನದ ಬೆಳವಣಿಗೆಯ ಕಾರಣಗಳು ಮತ್ತು ಅದರ ಮೇಲಿನ ಪ್ರಕ್ರಿಯಾತ್ಮಕ ನಿಯಂತ್ರಣಗಳನ್ನು ವಿವರಿಸಿರಿ.

Q. No. 2. What are the characteristics of administrative functions ? Distinguish between judicial and quasi-judicial functions. Marks : 16

ಆಡಳಿತಾತ್ಮಕ ಪ್ರಕಾರ್ಯಗಳ ಗುಣಲಕ್ಷಣಗಳೇನು ? ನ್ಯಾಯಿಕ ಮತ್ತು ಅರೆ-ನ್ಯಾಯಿಕ ಪ್ರಕಾರ್ಯಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

Q. No. 3. Discuss the conditions for the liability of administration in contracts. Marks : 16

ಕರಾರುಗಳಲ್ಲಿ ಆಡಳಿತದ ಬಾಧ್ಯತೆಯ ಷರತ್ತುಗಳನ್ನು ಚರ್ಚಿಸಿರಿ.

Q. No. 4. Explain the salient features of the writs of Certiorari and Prohibition. Refer to decided cases. Marks : 16

ಸರ್ಶಿಯೋರಾರಿ ಮತ್ತು ಪ್ರೊಹಿಬಿಷನ್ ಪರಮಾದೇಶಗಳ ಮುಖ್ಯಾಂಶಗಳನ್ನು ವಿವರಿಸಿರಿ. ನಿರ್ಧರಿತ ಪ್ರಕರಣಗಳನ್ನು ಉಲ್ಲೇಖಿಸಿ.

Q. No. 5. Explain Parliamentary control of public undertakings. Marks : 16

ಸಾರ್ವಜನಿಕ ಉದ್ದಿಮೆಗಳ ಮೇಲಿನ ಸಂಸತ್ತಿನ ನಿಯಂತ್ರಣವನ್ನು ವಿವರಿಸಿ.

Q. No. 6. What is meant by 'discretionary power' ? Distinguish discretionary power from arbitrary exercise of power in administration. Marks : 16

'ವಿವೇಚನಾಧಿಕಾರ' ಎಂದರೇನು ? ಆಡಳಿತದಲ್ಲಿ 'ವಿವೇಚನಾಧಿಕಾರ'ವನ್ನು 'ನಿರಂಕುಶ ಅಧಿಕಾರ ಚಲಾಯಿಸುವಿಕೆ' ಯಿಂದ ವ್ಯತ್ಯಾಸಿಸಿ.

Q. No. 7. "Classification of government functions as sovereign and non-sovereign for the purpose of tortious liability is not free from difficulty". Elucidate. Marks : 16

''ಸರಕಾರದ ಅಪಕೃತ್ಯಗಳ ಹೊಣೆಗಾರಿಕೆಯ ಸಲುವಾಗಿ ಕಾರ್ಯಗಳನ್ನು ಸಾರ್ವಭೌಮ ಮತ್ತು ಸಾರ್ವಭೌಮವಲ್ಲದ ಎಂದು ವಿಂಗಡಿಸುವುದು ತೊಂದರೆಗಳಿಂದ ಮುಕ್ತವಾಗಿಲ್ಲ''. ವಿಶದಪಡಿಸಿ.

P.T.O.

Q. No. 8. Write short notes on **any two** of the following. Marks : 2×8=16

ಕೆಳಗಿನವುಗಳಲ್ಲಿ ಯಾವುದಾದರೂ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ.

(a) Promissory estoppel Marks : 8

ವಚನ ಪ್ರತಿಬಂಧ

(b) Personal bias Marks : 8

ವೈಯಕ್ತಿಕ ಪಕ್ಷಪಾತ

(c) Ombudsman in India. Marks : 8

ಭಾರತದಲ್ಲಿ ಒಂಬಡ್ಸಮನ್.

Q. No. 9. Solve **any two** of the following problems. Marks : 2×10=20

ಕೆಳಗಿನ ಸಮಸ್ಯೆಗಳ ಯಾವುದಾದರೂ **ಎರಡನ್ನು** ಪರಿಹರಿಸಿ.

(a) A municipality is authorised by the Municipal Act to acquire land for the widening the streets. In the exercise of these powers, the Municipality acquires land and sells it at a higher price to make up the deficit in the Municipal Budget. Is the action valid ? Decide. Marks : 10

ಮುನ್ಸಿಪಾಲಿಟಿ ಕಾಯ್ದೆಯು ಬೀದಿರಸ್ತೆಯ ಅಗಲೀಕರಣಕ್ಕಾಗಿ ಭೂಮಿ ಸ್ವಾಧೀನ ಪಡೆಯುವುದಕ್ಕಾಗಿ ಮುನ್ಸಿಪಾಲಿಟಿಗೆ ಅಧಿಕಾರ ನೀಡಿತ್ತು. ಮುನ್ಸಿಪಾಲಿಟಿಯು ಈ ಅಧಿಕಾರವನ್ನು ಪ್ರಯೋಗಿಸಿ ಭೂ ಸ್ವಾಧೀನ ಮಾಡಿ ತದನಂತರ ಮುನ್ಸಿಪಾಲಿಟಿ ಬಜೆಟ್ ಕೊರತೆ ನೀಗಿಸಲು ಸ್ವಾಧೀನ ಪಡಿಸಿದ ಭೂಮಿಯನ್ನು ಹೆಚ್ಚಿನ ಬೆಲೆಯಲ್ಲಿ ಮಾರಾಟ ಮಾಡಿತ್ತು. ಈ ಕ್ರಮವು ವಿಧಿಬದ್ಧವೇ ? ನಿರ್ಧರಿಸಿ.

(b) A statute delegates certain of its powers to the central government. The Government further sub-delegates the same powers to the administrative authority. Is this sub-delegation valid ? Marks : 10

ಒಂದು ಶಾಸನವು ತನ್ನ ಕೆಲವು ಅಧಿಕಾರಗಳನ್ನು ಕೇಂದ್ರ ಸರ್ಕಾರಕ್ಕೆ ಪ್ರತ್ಯಾಯೋಜನೆ ಮಾಡುತ್ತದೆ. ಸರ್ಕಾರವು ಈ ಅಧಿಕಾರಗಳನ್ನು ಆಡಳಿತಾತ್ಮಕ ಪ್ರಾಧಿಕಾರಕ್ಕೆ ಉಪ-ಪ್ರತ್ಯಾಯೋಜನೆ ಮಾಡುತ್ತದೆ. ಈ ಉಪ-ಪ್ರತ್ಯಾಯೋಜನೆ ಊರ್ಜಿತವೇ ?

(c) Mr. 'X' was removed from Government service, because of not performing assigned work within limited period, without hearing him. Is it valid ? Marks : 10

'X' ನನ್ನು ನಿಗದಿತ ಅವಧಿಯೊಳಗೆ ವಹಿಸಿದ ಕೆಲಸ ಮಾಡಿಲ್ಲ ಎಂದು ವಿಚಾರಣೆ ಮಾಡದೇ ಸರಕಾರಿ ಸೇವೆಯಿಂದ ತೆಗೆದುಹಾಕಲಾಗಿದೆ. ಇದು ಊರ್ಜಿತವೇ ?